


# ಮಿಂಚಿ ಮರೆಯಾದ ಹ್ಯೂಸ್

■ ಮಹಮ್ಮದ್ ನೂಮಾನ್

ಶೆಫೀಲ್ಡ್ ಶೀಲ್ಡ್ ಟೂರ್ನಿಯ ಪಂದ್ಯದ ವೇಳೆ ಸೀನ್ ಅಬಾಟ್ ಎಸೆದ ಬೌನ್ಸರ್‌ನಲ್ಲಿ ಚೆಂಡು ತಲೆಗೆ ಬಡಿದು ಗಂಭೀರ ಗಾಯಗೊಂಡಿದ್ದ ಹ್ಯೂಸ್ ನವೆಂಬರ್ 27ರಂದು ನಿಧನರಾಗಿದ್ದಾರೆ. ಯುವ ಆಟಗಾರನ ಅಕಾಲಿಕ ಹಾಗೂ ಅನಿರೀಕ್ಷಿತ ನಿಧನಕ್ಕೆ ಕ್ರಿಕೆಟ್ ಜಗತ್ತು ಕಂಬನಿ ಮಿಡಿದಿದೆ. ಮ್ಯಾಕ್ಸ್‌ವಿಲ್ಲೆಯಲ್ಲಿ ಹ್ಯೂಸ್ ಅಂತ್ಯಕ್ರಿಯೆಯಲ್ಲಿ ಮಾಜಿ ಹಾಗೂ ಹಾಲಿ ಆಟಗಾರರ ದಂಡೇ ನೆರೆದಿತ್ತು. ಹ್ಯೂಸ್‌ಗೆ ಅಂತಿಮ ನಮನ ಸಲ್ಲಿಸಲು ಕ್ರಿಕೆಟ್ ಜಗತ್ತು ಒಂದಾಗಿತ್ತು.

ನ್ಯೂ ಸೌತ್‌ವೇಲ್ಸ್‌ನ ಮ್ಯಾಕ್ಸ್‌ವಿಲ್ಲೆಯಲ್ಲಿ 1988ರ ನವೆಂಬರ್ 30 ರಂದು ಜನಿಸಿದ್ದ ಹ್ಯೂಸ್ ಸಾಕಷ್ಟು ಕನಸುಗಳನ್ನು ಕಟ್ಟಿಕೊಂಡು ಬೆಳೆದಿದ್ದರು. ತಂದೆ ಗ್ರೆಗೊರಿ ರೈತನಾಗಿದ್ದು, ಬಾಳೆಹಣ್ಣಿನ ಕೃಷಿ ಮಾಡುತ್ತಿದ್ದರು. ಹ್ಯೂಸ್ ತಾಯಿ ವರ್ಜೀನಿಯಾ ಅವರು ಇಟಲಿ ಮೂಲದವರು.

ರಗ್ಬಿ ಆಟಗಾರನಾಗಿಯೂ ಹೆಸರು ಮಾಡಿದ್ದ ಹ್ಯೂಸ್ ಬಳಿಕ ಕ್ರಿಕೆಟ್‌ನತ್ತ ಮಾತ್ರ ಆಸಕ್ತಿ ಬೆಳೆಸಿಕೊಂಡರು. 2007ರಲ್ಲಿ ನಡೆದ 19 ವರ್ಷ ವಯಸ್ಸಿನೊಳಗಿನವರ ವಿಶ್ವಕಪ್‌ನಲ್ಲಿ ಆಸ್ಟ್ರೇಲಿಯವನ್ನು ಪ್ರತಿನಿಧಿಸಿದ್ದ ಅವರು ಅದೇ ವರ್ಷ ನ್ಯೂ ಸೌತ್‌ವೇಲ್ಸ್ ತಂಡದ ಪರ ಪ್ರಥಮ ದರ್ಜೆ ಕ್ರಿಕೆಟ್‌ಗೆ ಪದಾರ್ಪಣೆ ಮಾಡಿದ್ದರು.

ಆ ಬಳಿಕ ಆಸೀಸ್ ರಾಷ್ಟ್ರೀಯ ತಂಡದಲ್ಲೂ ಸ್ಥಾನ ಪಡೆಯುವಲ್ಲಿ ಯಶಸ್ವಿಯಾದರು. 26 ಟೆಸ್ಟ್ ಪಂದ್ಯಗಳನ್ನು ಆಡಿರುವ ಹ್ಯೂಸ್ 32.65ರ ಸರಾಸರಿಯಲ್ಲಿ 1535 ರನ್ ಪೇರಿಸಿದ್ದಾರೆ. 25 ಏಕದಿನ ಪಂದ್ಯಗಳಲ್ಲಿ 35.91ರ ಸರಾಸರಿಯಲ್ಲಿ 826 ರನ್ ಕಲೆಹಾಕಿದ್ದಾರೆ.

25 ಪಂದ್ಯಗಳನ್ನು ಆಡಿದ ಬಳಿಕವೂ 30 ಕ್ಕಿಂತ ಹೆಚ್ಚಿನ ಸರಾಸರಿಯನ್ನು ಅವರು ಕಾಯ್ದುಕೊಂಡಿದ್ದಾರೆ. ಈ ಮೂಲಕ ಭವಿಷ್ಯದಲ್ಲಿ ತಂಡದ ಬ್ಯಾಟಿಂಗ್‌ನ ಬಲ ಎನಿಸಿಕೊಳ್ಳುವ ಎಲ್ಲ ಸೂಚನೆ ನೀಡಿದ್ದರು. ತವರಿನಲ್ಲಿ ನಡೆಯುವ ಐಸಿಸಿ ವಿಶ್ವಕಪ್‌ನಲ್ಲಿ ಆಡಿ ಆಸೀಸ್‌ಗೆ ಟ್ರೋಫಿ ಗೆದ್ದುಕೊಡಬೇಕೆಂಬ ಕನಸು ಅವರದ್ದಾಗಿತ್ತು.

ಬ್ಯಾಟಿಂಗ್ ವೇಳೆ ಪ್ರತಿ ಬಾರಿಯೂ ಅಂಗಳದ ಮೂಲೆ ಮೂಲೆಗೂ ಅಟ್ಟುವ ಅದೇ ಚೆಂಡು ತನ್ನ ಜೀವಕ್ಕೆ ಎರವಾಗಬಹುದು ಎಂಬುದನ್ನು ಹ್ಯೂಸ್ ಯೋಚಿಸಿಯೇ ಇರಲಿಲ್ಲ. ರೇಸಿಂಗ್, ಬಾಕ್ಸಿಂಗ್ ಮುಂತಾದ ಅಪಾಯಕಾರಿ ಕ್ರೀಡೆಗಳಲ್ಲಿ ಕೆಲವೊಮ್ಮೆ ಸಾವು ಸಂಭವಿಸುತ್ತದೆ. ಆದರೆ ಕ್ರಿಕೆಟ್ ಆಟದಲ್ಲಿ ಚೆಂಡು ಬಡಿದು ಆಟಗಾರನೊಬ್ಬ ಈ ರೀತಿ ದುರಂತ ಸಾವನ್ನಪ್ಪಿದ್ದು ವಿರಳ.

**ಗೆಳತಿಯ ದುಃಖ:** 'ಲವ್ ಯೂ... ಮಿಸ್ ಯೂ.. ಲವ್ ಯೂ.. ಮಿಸ್ ಯೂ...' ಫಿಲಿಪ್ ಹ್ಯೂಸ್ ತನ್ನ ಗೆಳತಿ ಮೇಗನ್ ಸಿಂಪ್ಸನ್‌ಗೆ ಕಳುಹಿಸಿದ ಕೊನೆಯ ಸಂದೇಶ ಇದು. ಈ ಸಂದೇಶ ಬರುವ ವೇಳೆ ಮೇಗನ್ ಹವಾಯ್‌ನಲ್ಲಿ ರಜಾದಿನ ಕಳೆಯುತ್ತಿದ್ದಳು. ಹ್ಯೂಸ್ 26ರ ಹರೆಯದ ಸಿಂಪ್ಸನ್ ಅವರನ್ನು ಮೂರು ವರ್ಷಗಳ ಹಿಂದೆ ಸಿಡ್ನಿಯ ಪಬ್‌ನಲ್ಲಿ ಮೊದಲ ಬಾರಿ ಭೇಟಿಯಾಗಿದ್ದರು. ಆ ಬಳಿಕ ಇಬ್ಬರೂ ತುಂಬಾ ಹತ್ತಿರವಾಗಿದ್ದರು.

'ಕ್ರಿಕೆಟ್‌ನಲ್ಲಿ ಎಷ್ಟೇ ಎತ್ತರದ ಸಾಧನೆ ಮಾಡಿದರೂ ಸುಂದರ ಕುಟುಂಬವೊಂದನ್ನು ಕಟ್ಟಿ ಮ್ಯಾಕ್ಸ್‌ವಿಲ್ಲೆಯಲ್ಲಿ ಜೀವನ ಸಾಗಿಸುವುದು ಅವರ ಕನಸಾಗಿತ್ತು. ಈ ವಿಷಯವನ್ನು ನನ್ನಲ್ಲಿ ಹಲವು ಸಲ ಹಂಚಿಕೊಂಡಿದ್ದರು. ಕ್ರಿಕೆಟ್‌ಅನ್ನು ಪ್ರೀತಿಸುವಂತೆ ಹೊಲ ಹಾಗೂ ಹಸುಗಳನ್ನು ಅವರು ಅತಿಯಾಗಿ ಪ್ರೀತಿಸುತ್ತಿದ್ದರು' ಎಂದು ಎಂದು ಮೇಗನ್ ಹೇಳಿದ್ದಾರೆ.

'ಹ್ಯೂಸ್ ತಂದೆ–ತಾಯಿಯನ್ನು ಅತಿಯಾಗಿ ಪ್ರೀತಿಸುತ್ತಿದ್ದರು. ಹೆತ್ತವರನ್ನು ಅಷ್ಟೊಂದು ಅಕ್ಕರೆಯಿಂದ ಕಾಣುವ ಇನ್ನೊಬ್ಬರನ್ನು ನಾನು ನೋಡಿಲ್ಲ.. ತಂದೆಗೆ ಪ್ರತಿದಿನ ಕನಿಷ್ಠ ಐದು ಸಲವಾದರೂ ಕರೆ ಮಾಡುತ್ತಿದ್ದರು' ಎಂಬುದು ಆಕೆಯ ಹೇಳಿಕೆ.

ಈಗ ಎಲ್ಲೆಲ್ಲೂ ಹ್ಯೂಸ್ ಅವರದ್ದೇ ನೆನಪು.